# ‘ಇಹಾಸನೇ ಶುಷ್ಯತು ಮೇ ಶರೀರಂ..’

ಮೂಲ ಹಿಂದೀ : ಸ್ವಾಮಿ ಬ್ರಹ್ಮೇಶಾನಂದ

ಅನುವಾದ : ಮಾತಾ ತ್ಯಾಗಮಯೀ

ಮಹಾನಿಷ್ಕ್ರಮಣಕ್ಕೆಂದು, ಸತ್ಯಸಾಕ್ಷಾತ್ಕಾರಕ್ಕೆಂದು ಮನೆ, ಬಂಧುವರ್ಗ, ರಾಜ್ಯ ಸಂಪತ್ತು ಎಲ್ಲವನ್ನು ತ್ಯಜಿಸಿ ಹೊರಟ ಸಿದ್ಧಾರ್ಥನು ಅನೇಕ ಸಾಧಕರ, ಆಚಾರ್ಯರುಗಳ ಬಳಿ ಸಾರಿದನು. ಅವರ ಉಪದೇಶದಂತೆ ಕಠಿಣತಮವಾದ ಸಾಧನೆ-ತಪ-ವ್ರತಗಳನ್ನು ಮಾಡಿದನು. ಅವನು ರಾಜ್ಯ ಸುಖಭೋಗಗಳ ಅತಿಯನ್ನು ಕಂಡಿದ್ದನು, ಈಗ ದೇಹದಂಡನೆಯ ಅತಿಯನ್ನು ಕಂಡನು. ಈ ಎರಡೂ ಅತಿಗಳು ಸರಿಯಲ್ಲ ಎಂದು ಅವನು ಮನಗಂಡನು. ಅವನು ಬೋಧಿವೃಕ್ಷದಡಿ ಹೋಗಿ ಕುಳಿತನು. ಅವನು ತಾನು ಕುಳಿತಿದ್ದ ಆಸನವನ್ನು ಹಸ್ತದಿಂದ ಸ್ಪರ್ಶಿಸಿ ಒಂದು ಸಂಕಲ್ಪಗೈದನು, ಒಂದು ದೃಢನಿರ್ಧಾರನ್ನು ಮಾಡಿದನು:

ಇಹಾಸನೇ ಶುಷ್ಯತು ಮೇ ಶರೀರಂ
ತ್ವಗಸ್ಥಿಮಾಂಸಂ ವಿಲಯಂ ಚ ಯಾತು ।
ಅಪ್ರಾಪ್ಯ ಬೋಧಿಂ ಬಹುಕಲ್ಪದುರ್ಲಭಾಂ
ನೈವಾಸನಾತ್ಕಾಯಮತಃ ಚಲಿಷ್ಯತೇ ॥

*(ಲಲಿತ ವಿಸ್ತರ ೧೯.೫೭)*

ಎಂದರೆ, ‘ಈ ದೇಹವು ಇದೇ ಆಸನದ ಮೇಲೆ ಒಣಗಿ ಹೋಗಲಿ, ಅಸ್ಥಿ ಮೂಳೆಮಾಂಸಗಳು ಕರಗಿಹೋಗಲಿ, ಒಂದು ಯುಗವೇ ಕಳೆದುಹೋಗಲಿ, ಬಹುಕಲ್ಪದುರ್ಲಭವಾದ ಸತ್ಯ ಸಾಕ್ಷಾತ್ಕಾರವಾಗುವವರೆಗೆ ಈ ದೇಹ ಆಸನವನ್ನು ಬಿಟ್ಟು ಏಳದು.’

ಅತ್ಯುನ್ನತ ಗುರಿಸಾಧನೆಯಲ್ಲಿ ದೃಢಸಂಕಲ್ಪದ ದ್ಯೋತಕವಾದ ಈ ಶ್ಲೋಕ ಸ್ವಾಮೀಜಿಯವರಿಗೆ ಬಹಳ ಪ್ರಿಯವಾಗಿತ್ತು. ಕಾಶೀಪುರ ತೋಟದ ಮನೆಯಲ್ಲಿ, ಶ್ರೀರಾಮಕೃಷ್ಣರ ಸೇವೆಯಲ್ಲಿ ತೊಡಗಿದ ದಿನಗಳಲ್ಲಿ, ನರೇಂದ್ರಾದಿ ಯುವಶಿಷ್ಯರು ತಾವು ವಾಸಿಸುವ ಕೋಣೆಯ ಗೋಡೆಯ ಮೇಲೆ ಈ ಶ್ಲೋಕವನ್ನು ದೊಡ್ಡ ಅಕ್ಷರಗಳಲ್ಲಿ ಬರೆದಿದ್ದರು. ಸ್ವಾಮೀಜಿ ತಮ್ಮ ಪತ್ರಗಳಲ್ಲೂ, ಪ್ರವಚನಗಳಲ್ಲೂ ಅನೇಕ ಬಾರಿ ಈ ಶ್ಲೋಕವನ್ನು ಮತ್ತು ಬುದ್ಧನ ದೃಢ ಸಂಕಲ್ಪವನ್ನು ಉಲ್ಲೇಖಿಸಿ, ಶ್ರೋತೃಗಳನ್ನು ಪ್ರೋತ್ಸಾಹಿಸುತ್ತಿದ್ದರು. ಮುಕ್ತಿ ಅಥವಾ ಬೋಧಿಯ ವಿಷಯ ಹಾಗಿರಲಿ, ಸಾಮಾನ್ಯ ವ್ಯವಹಾರ ಜಗತ್ತಿನಲ್ಲೂ ದೃಢನಿಶ್ಚಯ, ಸತತ ಪ್ರಯತ್ನಶೀಲತೆ ಮತ್ತು ಧೈರ್ಯವಿಲ್ಲದೆ ಯಶಸ್ವಿಯಾಗಲು ಸಾಧ್ಯವಿಲ್ಲ. ಇದನ್ನರಿತಿದ್ದೂ ಹೆಚ್ಚಿನ ಸಾಧಕರಲ್ಲಿ ಈ ಗುಣಗಳಿಲ್ಲ. ಈ ಶ್ಲೋಕವನ್ನು ಬಹಳ ಸಲ ಮನನ ಮಾಡಿ, ಬುದ್ಧನ ಜೀವನವನ್ನು ಅನುಸಂಧಾನಗೈದೂ ಬಹಳ ಜನರಲ್ಲಿ ಈ ದೃಢನಿರ್ಧಾರವು ಇಲ್ಲ. ಅದಕ್ಕೆ ಹಲವು ಕಾರಣಗಳಿವೆ. ಬುದ್ಧನ ಜೀವನದ ಹಿನ್ನೆಲೆಯಲ್ಲಿ ಅದನ್ನು ಚರ್ಚಿಸಬಹುದು.

## ೧) ಗುರಿಯನ್ನು ಕುರಿತ ಸ್ಪಷ್ಟ ಕಲ್ಪನೆ

ಬುದ್ಧನ ಮೇಲಿನ ಉದ್ಗಾರದಲ್ಲಿ ಸಾಧಕನಿಗೆ ಅತ್ಯಂತ ಆವಶ್ಯಕವಾದ ಗುರಿಯ ಕುರಿತು ಸ್ಪಷ್ಟ ಕಲ್ಪನೆ ಇದೆ. ಒಬ್ಬ ಡಾಕ್ಟರ್, ವಕೀಲ, ಪ್ರಾಧ್ಯಾಪಕ, ಪ್ರಾಚಾರ್ಯ, ಇಂಜಿನೀಯರ್, ರಾಜಕಾರಣಿಯಾಗುವುದು, ಹಣ ಸಂಪಾದನೆ ಅಥವಾ ಐಹಿಕ ಉನ್ನತಿಯನ್ನು ಗುರಿಯಾಗಿ ಹೊಂದುವುದು, ಆ ಕುರಿತು ಸ್ಪಷ್ಟ ಕಲ್ಪನೆಯನ್ನು ತಾಳುವುದು ಸುಲಭವಿದೆ. ಆದರೆ ಮೋಕ್ಷ, ಭಗವತ್ ಸಾಕ್ಷಾತ್ಕಾರ, ಬ್ರಹ್ಮಜ್ಞಾನ, ಕೈವಲ್ಯ, ಬೋಧಿ ಎಂದು ಕರೆಯಲ್ಪಡುವ ಆಧ್ಯಾತ್ಮಿಕ ಗುರಿಯನ್ನು ಕಲ್ಪಿಸಿಕೊಳ್ಳುವುದು, ಕೊನೆಯವರೆಗೂ ಆ ಮಾರ್ಗದಲ್ಲಿ ಸ್ಥಿರವಾಗಿರುವುದು ಸುಲಭವಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಬೆಳೆದು ಬಂದ ಪ್ರತಿಯೊಂದು ಮಗುವೂ ಮೋಕ್ಷವೇ ಜೀವನದ ಗುರಿ ಎಂದು ಕೇಳಿದೆ. ಶ್ರೀರಾಮಕೃಷ್ಣರೂ ಸಾಕ್ಷಾತ್ಕಾರ ಜೀವನದ ಗುರಿ ಎಂದು ಮತ್ತೆ ಮತ್ತೆ ಹೇಳಿರುವರು. ನಾವೂ ಇದನ್ನು ಮಾತಿನಲ್ಲಿ ಹೇಳುತ್ತೇವೆ. ಆದರೆ ಆ ಕುರಿತು ಗಂಭೀರವಾಗಿ ಚಿಂತನೆ ಮಾಡಿರುವುದಿಲ್ಲ. ಮನಸ್ಸೆಲ್ಲವೂ ದೈನಂದಿನ ಬದುಕಿನ ಪ್ರಾಪಂಚಿಕ ಚಿಂತನೆಗಳಿಂದ ತುಂಬಿದೆ. ಅದರ ಮಧ್ಯೆ ಉನ್ನತವಾದ, ಮಹತ್ವಪೂರ್ಣವಾದ ವಿಚಾರವೂ ನಮಗೆ ಗೌಣವಾಗಿ ಹೋಗುತ್ತದೆ ಅಥವಾ ಅದೊಂದು ನಂಬಿಕೆ ಮಾತ್ರವಾಗಿ, ಸಿದ್ಧಾಂತ ಮಾತ್ರವಾಗಿ ಉಳಿದು ಬದುಕಿನೊಂದಿಗೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲ. ಹಾಗಾದರೆ ಸಾಕ್ಷಾತ್ಕಾರವನ್ನು ನಮ್ಮ ಜೀವನದ ಗುರಿ ಎಂದು ನಾವು ಪ್ರಾಮಾಣಿಕವಾಗಿ ತೆಗೆದುಕೊಂಡಿಲ್ಲ. ‘‘ಭಗವಂತ ಇರುವುದಾದಲ್ಲಿ ನಾವು ಅವನನ್ನು ನೋಡಲೇಬೇಕು, ಕೈವಲ್ಯ ಅಥವಾ ಬೋಧಿ ಎಂಬ ಸ್ಥಿತಿ ಇರುವುದಾದಲ್ಲಿ ನಾನು ಅದನ್ನು ಪಡೆಯಲೇಬೇಕು’’ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅದಕ್ಕಾಗಿ ನಾವು ಪ್ರಯತ್ನಿಸದಿದ್ದರೆ ನಾವು ಸ್ವಾಮೀಜಿಯವರ ಪ್ರಕಾರ ನಾಸ್ತಿಕರಾಗುತ್ತೇವೆ. ಒಬ್ಬ ಕಳ್ಳನಿಗೆ ಪಕ್ಕದ ಕೋಣೆಯಲ್ಲಿ ನಿಧಿ ಇದೆ ಎಂದು ದೃಢವಾಗಿ ಗೊತ್ತಾದರೆ ಅವನಿಗೆ ಅದನ್ನು ವಶಪಡಿಸಿಕೊಳ್ಳುವವರೆಗೆ ನೆಮ್ಮದಿ ಇರದು. ನಮಗೆ ಬೋಧಿಯು ಬಹುಕಲ್ಪದುರ್ಲಭವಾದುದು. ಚರಮ ಆನಂದದ ಮನಸ್ಥಿತಿ ಅದು ಎಂದು ಅರ್ಥವಾದರೆ ಆ ಕಳ್ಳನಂತೆ ನಮಗೆ ಚಡಪಡಿಸದೆ ಇರಲು ಸಾಧ್ಯವೇನು? ನಮ್ಮಲ್ಲಿ ಮೋಕ್ಷಕ್ಕಾಗಿ ಆಸೆ, ನಿರೀಕ್ಷೆಯಿಲ್ಲದಿರುವುದೇ, ನಾವು ಅದಕ್ಕಾಗಿ ಪ್ರಯತ್ನ ಶೀಲರಾಗದಿರುವುದೇ ನಾವು ಆ ವಿಷಯದಲ್ಲಿ ಅನಭಿಜ್ಞರೆಂಬುದನ್ನು ಹೇಳುತ್ತದೆ.

ಒಂದೇ ಗುರಿಯನ್ನು ವಿಭಿನ್ನ ಹೆಸರುಗಳಲ್ಲಿ ಹೇಳಿರುವುದರಿಂದ ಸಮಸ್ಯೆ, ಸಂಶಯಗಳು ಹುಟ್ಟಿವೆ. ಶಾಸ್ತ್ರದಲ್ಲಿ ಮೋಕ್ಷದ ಮಹಿಮೆಯನ್ನು ಓದಿ ಅದನ್ನು ಪಡೆಯಲು ಹೋಗಿ ಸಣ್ಣ ಸಣ್ಣ ದರ್ಶನಗಳನ್ನು ಮೋಕ್ಷ ಎಂದು ಬಗೆಯುವ ಭ್ರಮೆಗೊಳಗಾಗುತ್ತೇವೆ. ಕೈವಲ್ಯ, ಬೋಧಿ, ಸಾಕ್ಷಾತ್ಕಾರ, ಇವೆಲ್ಲ ಕ್ಷಣಿಕ ಅನುಭವಗಳಲ್ಲ, ಶಾಶ್ವತ ಮನಸ್ಥಿತಿಗಳು. ಶಂಕರಾಚಾರ್ಯರು 'ವಿವೇಕ ಚೂಡಾಮಣಿ'ಯಲ್ಲಿ ಬ್ರಹ್ಮಾತ್ಮೈಕ್ಯಬೋಧೆಯನ್ನು ಪುನಃ ಪುನಃ ಅಭ್ಯಾಸದಿಂದ ದೃಢಪಡಿಸಿಕೊಳ್ಳಬೇಕು ಎಂದಿರುವರು. ಶ್ರೀರಾಮಕೃಷ್ಣರು ಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಂಡ ಮೇಲೂ ಅವಳ ನಿರಂತರ ಸಾನ್ನಿಧ್ಯಸುಖಕ್ಕಾಗಿ ತಪಸ್ಸನ್ನಾಚರಿಸಿದರು. ಆ ಗುರಿಯನ್ನು ಸೇರಿದಾಗ ಸಾಧಕನ ಚಾರಿತ್ರ್ಯದಲ್ಲಿ ಗಮನಾರ್ಹ ಪರಿವರ್ತನೆಯಾಗುತ್ತದೆ. ಅವನು ಎಂದೆಂದಿಗೂ ಪೂರ್ಣ ವಾಸನಾರಹಿತನಾಗುತ್ತಾನೆ, ತತ್ಕಾಲಕ್ಕೆ ಅಲ್ಲ.

ಇನ್ನೊಂದು ತೊಂದರೆ ಸಣ್ಣ ಹಂತದ ಸಣ್ಣ ಸಣ್ಣ ಗುರಿಗಳನ್ನೇ ಚರಮಗುರಿ ಎಂದು ಬಗೆದು ಅಲ್ಲೇ ಸಿಕ್ಕಿಬೀಳುವುದು. ಅತ್ಯುನ್ನತ ಗುರಿಯನ್ನು ಸಾಧಿಸಲು ಹಲವು ಸಣ್ಣ ಸಣ್ಣ ಗುರಿಗಳಿರುತ್ತವೆ. ಹಲವು ಹಂತಗಳನ್ನು ದಾಟಿಹೋಗಬೇಕಾಗುತ್ತದೆ. M.D. ಡಾಕ್ಟರ್ ಆಗಬಯಸುವವನು ಮೊದಲು ಪ್ರೌಢಶಾಲೆಯಲ್ಲಿ ಮತ್ತು ಪದವಿಪೂರ್ವ ಪರೀಕ್ಷೆಯಲ್ಲಿ ಪಾಸಾಗಬೇಕು. ಬಳಿಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿ MBBS ಮುಗಿಸಬೇಕು. ಆಗ M.D. ಮಾಡಬಹುದು. ಅದೇ ರೀತಿ ಮೋಕ್ಷ ಶಾಲೆಯಲ್ಲಿ ಮೊದಲು ನಿಷ್ಕಾಮ ಕರ್ಮಯೋಗದಲ್ಲಿ ಪ್ರತಿಷ್ಠಿತರಾದಾಗ ಒಂದು ಸುಖ ಸಿಗುತ್ತದೆ, ಒಂದು ರಸ ಸಿಗುತ್ತದೆ. ಅನೇಕ ಸಾಧಕರು ಅಲ್ಲೇ ನಿಂತುಬಿಡುತ್ತಾರೆ. ಮೋಕ್ಷಕ್ಕಾಗಿ ತ್ಯಾಗ ಬೇಕು. ಅದಕ್ಕಾಗಿ ಸಾಧಕ ಸಂನ್ಯಾಸ ವ್ರತವನ್ನು ಸ್ವೀಕರಿಸುತ್ತಾನೆ. ಕೆಲವು ಸಾಧಕರು ಅದೇ ಗುರಿ ಎಂದು ಬಗೆದು ಅಲ್ಲೇ ಸ್ಥಗಿತರಾಗಿಬಿಡುತ್ತಾರೆ. ಹೀಗೆ ಪ್ರತಿಯೊಂದು ಸಾಧನಾಮಾರ್ಗದಲ್ಲಿ ಹಲವು ಅಧ್ಯಾಯಗಳು, ಹಲವು ಹಂತಗಳು ಇರುತ್ತವೆ. ಈ ರೀತಿ ಹಲವು ಗೌಣ ಗುರಿಗಳ ಸೋಪಾನಗಳನ್ನೇರಿ ಚರಮಗುರಿ ಯನ್ನು ತಲುಪುವುದು ಇರುತ್ತದೆ. ಈ ಗೌಣ ಗುರಿಗಳೇ ಪರಮ ಗುರಿ ಅಲ್ಲ. ಆದ್ದರಿಂದ ಶಾಸ್ತ್ರಗಳಲ್ಲಿ ಆ ಸಾಧನೆಗಳನ್ನು ಖಂಡಿಸಲಾಗಿದೆ. ವೇದಗಳು ವರ್ಣಿಸಿದ ಶಾಂಡಿಲ್ಯಾದಿ ವಿದ್ಯೆಗಳನ್ನು ಉಪನಿಷತ್ತು ''ಅವನ್ನು ಅನುಸರಿಸುವವರು ಘೋರತಮ ಅಂಧಕಾರವನ್ನು ಪ್ರವೇಶಿಸುತ್ತಾರೆ'' ಎಂದು ಖಂಡಿಸಿದೆ. ಡಾಕ್ಟರ್ ಆಗಬಯಸುವವನು CETಯಲ್ಲಿ ಉತ್ತಮ ಅಂಕಗಳನ್ನು ಪಡೆದಿರಬಹುದು. ಆದರೆ ಅಲ್ಲಿಯೇ ಮುಗಿಯುವಂತಿಲ್ಲ, ಅವನು ಮುಂದುವರಿಯಬೇಕು. ಅಂತೆಯೇ ಮುಮುಕ್ಷುವು ನಿಷ್ಕಾಮ ಕರ್ಮಯೋಗವನ್ನು ಚೆನ್ನಾಗಿ ಮಾಡುತ್ತಿರಬಹುದು. ಕಾಡಿನಲ್ಲಿ ಮುಂದುವರಿದರೆ ಗಂಧದ ಮರಗಳು ಸಿಗುತ್ತವೆ. ಇನ್ನೂ ಮುಂದುವರಿದರೆ ಚಿನ್ನದ ಗಣಿ ಸಿಗುತ್ತದೆ, ಇನ್ನೂ ಮುಂದುವರಿದರೆ ವಜ್ರ, ಪಚ್ಚೆಗಳ ಗಣಿ. ಏಳು ದ್ವಾರಗಳ ಒಳಗೆ ಚಕ್ರವರ್ತಿ ಇದ್ದಾನೆ. ಪ್ರತಿಯೊಂದು ದ್ವಾರದ ಬಳಿ ಸಾರಿದಾಗಲೂ ಠಾಕುಠೀಕಾದ ಪೋಷಾಕನ್ನು ಧರಿಸಿದ ದ್ವಾರಪಾಲಕನನ್ನು ನೋಡಿ ಅವನನ್ನು ರಾಜನೆಂದು ತಪ್ಪಾಗಿ ತಿಳಿಯಬಾರದು. ಸಾಧನೆಯ ಸೋಪಾನಗಳನ್ನೇ ಗುರಿಯೆಂದು ತಪ್ಪಾಗಿ ಬಗೆಯದೆ ಎಚ್ಚರವಾಗಿರಲೆಂದು ಶಾಸ್ತ್ರಗಳು ಸಾಧನೆಯ ಮೆಟ್ಟಿಲುಗಳನ್ನು ಹಂತಹಂತವಾಗಿ ವಿವರಿಸಿ ಹೇಳಿವೆ. ಗುರಿ ಒಂದೇ ಆಗಿರಲು ಸಾಧ್ಯ, ಅನೇಕ ಅಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಇನ್ನೊಂದು ಮಾತು. ಗುರಿ ಎಷ್ಟು ಸುಸೂಕ್ಷ್ಮ ಮತ್ತು ಗಹನವೆಂದರೆ ಅದು ಇಂದ್ರಿಯ ಮತ್ತು ಮನಸ್ಸುಗಳಿಗೆ ಲಭಿಸುವ ಬಾಹ್ಯ ಅನುಭವಗಳಿಗಿಂತ ಪ್ರತ್ಯೇಕವಾದುದು. ಅದನ್ನು ಗ್ರಹಿಸುವುದು ಬಹಳ ಕಠಿಣ. ಆದ್ದರಿಂದ ಬುದ್ಧಿ ಆ ಕುರಿತು ಸ್ಪಷ್ಟ ಕಲ್ಪನೆಯನ್ನು ತಾಳುವ ಮೊದಲು ಆರಂಭದಲ್ಲಿ ಬಹಳ ಅಲೆಯುವಂತಾಗುತ್ತದೆ. ಬುದ್ಧನೂ ಸತ್ಯಶೋಧಕನಾಗಿ ದುಃಖನಿವೃತ್ತಿಯ ಉಪಾಯವನ್ನು ಹುಡುಕಿಕೊಂಡು ಹೋದವನು, ಗುರಿಯ ಬಗ್ಗೆ ಅಂತಹ ಕಲ್ಪನೆಯನ್ನು ಹೊಂದಿರಲಿಲ್ಲ, ಎಂದು ನೀವು ವಾದಿಸಬಹುದು. ನಿಜವಾಗಿ ಹೇಳಬೇಕೆಂದರೆ, ಶಾಸ್ತ್ರಗಳಲ್ಲಿ ಗುರಿಯನ್ನು ಎಷ್ಟೇ ವರ್ಣಿಸಿದರೂ ಪ್ರತಿಯೊಬ್ಬ ಸಾಧಕನಿಗೆ ಅದು ಹೊಸದಾಗಿಯೇ ಗೋಚರಿಸುತ್ತಿರುತ್ತದೆ. ಬುದ್ಧನಿಗೆ ಮೊದಲು ಉಪನಿಷತ್ತುಗಳು ಇದ್ದರೂ ಬುದ್ಧ ಆ ಅನುಭವಗಳನ್ನು ಹೊಸದು ಎಂಬಂತೆ ಪುನರಾವಿಷ್ಕರಿಸಿದನು. ಬುದ್ಧನಷ್ಟೇ ಅಲ್ಲ, ಶ್ರೀರಾಮಕೃಷ್ಣರೂ, ಸ್ವಾಮಿ ವಿವೇಕಾನಂದರೂ ಬುದ್ಧನಂತೆ ಸಂಶೋಧಕರಾಗಿ, ಭಗವಂತ ಇದ್ದಾನೆಯೇ ಎಂದು ಪ್ರಶ್ನಿಸಿದರು, ತಾವೇ ಆ ಪ್ರಶ್ನೆಗೆ ಉತ್ತರವನ್ನು ಕಂಡುಕೊಂಡರು.

ಬೋಧಿಯನ್ನು **ಬಹುಕಲ್ಪದುರ್ಲಭಃ** ಎಂದು ಕರೆಯಲಾಗಿದೆ. ಭಗವದ್ಗೀತೆಯಲ್ಲೂ ಅದನ್ನು ದುರ್ಲಭ ಎಂದು ಕರೆದಿದ್ದಾರೆ. ಹಾಗಾದರೆ ಭಗವತ್‌ವಸ್ತು ಇಷ್ಟು ದುರ್ಲಭವಾಗಿರುವಾಗ, ಯಾವಾಗ ಯಾವ ಜನ್ಮದಲ್ಲಿ ನಮಗೆ ಸಿಗುತ್ತದೆಯೋ ಎಂಬ ಪ್ರಶ್ನೆ ಏಳುವ ಸಾಧ್ಯತೆಗಳಿವೆ. ಹಾಗಾದರೆ ಈ ಜನ್ಮದಲ್ಲಿ ಹೆಸರು, ಕೀರ್ತಿಯನ್ನು ಮತ್ತು ಐಹಿಕ ಸಮುನ್ನತಿಯನ್ನು ಗುರಿಯಾಗಿ ಇಟ್ಟುಕೊಳ್ಳೋಣ. ಅಂತಹ ಉನ್ನತ ಆದರ್ಶವನ್ನಿಟ್ಟುಕೊಂಡು ಈ ಕಡೆ ಸಂಸಾರಸುಖವೂ ಸಿಗುವುದಿಲ್ಲ, ಆ ಕಡೆ ಭಗವದಾನಂದವೂ ಇಲ್ಲ, ಎಂಬ ಸಂಶಯ ಹುಟ್ಟಿದರೆ! ಈ ಸಂಶಯವುಳ್ಳವರು ಮೋಕ್ಷವನ್ನು ಗುರಿಯಾಗಿ ಇಟ್ಟುಕೊಳ್ಳಬಾರದು. ಮೋಕ್ಷವನ್ನು ಗುರಿಯಾಗಿ ಹೊಂದಿದವರಿಗೆ, ಸ್ವಾಮಿ ವಿವೇಕಾನಂದರ, ''ರಾಮ ಸಿಗಲಿಲ್ಲವೆಂದ ಮಾತ್ರಕ್ಕೆ ಶ್ಯಾಮಾಳನ್ನು ಕಟ್ಟಿಕೊಂಡು, ಮಕ್ಕಳಿಗೆ ಜನ್ಮ ಕೊಡುತ್ತ ಇರಬೇಕೆ? ಅಮೃತ ಸಿಗಲಿಲ್ಲವೆಂದ ಮಾತ್ರಕ್ಕೆ ಗಟರಿನ ಕೊಚ್ಚೆ ನೀರನ್ನು ಕುಡಿಯುವುದೇನು?'' ಎಂಬ ಉತ್ತರ ಎಲ್ಲವನ್ನೂ ಹೇಳುತ್ತದೆ. ಇಹ-ಪರ ಸುಖ, ಹೆಸರು-ಕೀರ್ತಿ ಧನ ಸಂಪತ್ತು ಋದ್ಧಿ-ಸಿದ್ಧಿ, ಸಮಾಜಸೇವೆ ದೇಶಸೇವೆ ಇವನ್ನೆಲ್ಲ ತ್ಯಜಿಸಿದಾಗಲೇ ಪರಮಾನಂದ ಲಭಿಸುವಂಥದು. ಸರ್ವತ್ಯಾಗದ ತುದಿಯೇ ಮೋಕ್ಷ. ಸಾಧಕ ಇದನ್ನು ಮನಗೊಂಡಿರುತ್ತಾನೆ. ಆ ಗುರಿ ಬಹುಕಲ್ಪ ದುರ್ಲಭ ಎಂಬುದು ಅದರ ಅಗಾಧ ಮೌಲ್ಯವನ್ನು, ಅದರ ಸರ್ವಶ್ರೇಷ್ಠತೆ ಯನ್ನು ತಿಳಿಸುತ್ತದೆ. ಅದಕ್ಕಾಗಿ ಸರ್ವಸಂಗಪರಿತ್ಯಾಗ

ಮಾಡಿ, ಜನ್ಮಜನ್ಮಾಂತರಗಳವರೆಗೆ ಅವಿಶ್ರಾಂತ ಪರಿಶ್ರಮಗೈಯಲು, ಸಿದ್ಧನಿರುವ ಸಾಧಕನಿಗೆ ಆ ಗುರಿ ಇದೇ ಜನ್ಮದಲ್ಲಿ, ಈ ಕ್ಷಣ ಒಲಿಯುತ್ತದೆ.

### ೨) ದಾರಿ ಯಾವುದು?

ದೇಶ, ಕಾಲ ಪಾತ್ರವಿಶೇಷತೆಗೆ ತಕ್ಕಂತೆ ಗುರಿಯನ್ನು ಸಾಧಿಸಲು ಅನೇಕ ಮಾರ್ಗಗಳಿವೆ. ಪ್ರಾಚೀನ ಭಾರತೀಯ ಸಮಾಜದಲ್ಲಿ ವರ್ಣಾಶ್ರಮ ಧರ್ಮವನ್ನು ಇದೇ ಹಿನ್ನಲೆಯಲ್ಲಿ ವಿಧಿಸಲಾಗಿತ್ತು. ಸ್ವಧರ್ಮ ಪರಿಪಾಲನೆಯಿಂದ ಮೋಕ್ಷ ಎಂಬ ಆ ಪ್ರಾಚೀನ ಪದ್ಧತಿಯು ಇಂದು ಬದಲಾದ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸೂಕ್ತವಾಗಲಿಕ್ಕಿಲ್ಲ. ಅಂದು ವ್ಯಕ್ತಿಯ ಕರ್ತವ್ಯಾಕರ್ತವ್ಯಗಳನ್ನು, ಅವನ ಇಷ್ಟ ಯಾವುದು, ಮಂತ್ರ ಯಾವುದು ಮತ್ತಿತರ ನಿರ್ದೇಶನಗಳನ್ನು ಗುರು ಸ್ಪಷ್ಟವಾಗಿ ಹೇಳುತ್ತಿದ್ದನು. ಆದರೆ ಇಂದು ಸಾಧಕ ತನ್ನ ಸಾಧನಾಮಾರ್ಗವನ್ನು ತೀರ್ಮಾನಿಸಲು ೧) ತನ್ನ ಜೀವನ ಮಾರ್ಗ ಯಾವುದು? ೨) ಯೋಗಗಳಲ್ಲಿ ತನ್ನ ಯೋಗ ಮಾರ್ಗ ಯಾವುದು? ೩) ತನ್ನ ಇಷ್ಟ ಯಾವುದು? ಎಂಬ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

#### 1) ಜೀವನ ಮಾರ್ಗದ ಆಯ್ಕೆ:

ಇಲ್ಲಿ ಜೀವನ ಮಾರ್ಗ ಎಂದು ಹೇಳಿದಾಗ ಮುಂದೆ ತಾನು ಗೃಹಸ್ಥನಾಗುವುದೇ, ಸಂನ್ಯಾಸಿಯಾಗುವುದೇ ಅಥವಾ ಅವಿವಾಹಿತ ನಾಗಿರುವುದೇ ಎಂಬ ಆಯ್ಕೆ. ಸಂನ್ಯಾಸಿಯಾದರೆ ಸೇವಾನಿರತ ಕರ್ಮಯೋಗಿಯೇ ಅಥವಾ ಎಲ್ಲ ಜನಸಂಪರ್ಕ ಸೇವಾಕರ್ಮಗಳನ್ನು ತೊರೆದ ಸಾಧಾನಾನಿರತ ಸಂನ್ಯಾಸಿಯೇ ಅಥವಾ ಏಕಾಂತ ಜೀವನವನ್ನು ಆಶ್ರಯಿಸಿದ ಸಂನ್ಯಾಸಿಯೆ? ಅಥವಾ ಸಂನ್ಯಾಸಿಯಾಗದೆ ಅವಿವಾಹಿತನಾಗಿ ಇರುವುದಾದರೆ ಹೇಗೆ ಜೀವನ ನಡೆಸುವುದು? ಮನೆಯಲ್ಲಿದ್ದುಕೊಂಡೇ, ಅಥವಾ ಯಾವುದೇ ಸೇವಾಸಂಸ್ಥೆಯಲ್ಲಿದ್ದುಕೊಂಡೆ? ನಮ್ಮ ಜೀವನ ಮಾರ್ಗದ ಆಯ್ಕೆ ನೇರವಾಗಿ ಸಾಧನಾ ಜೀವನಕ್ಕೆ ಸಂಬಂಧಪಟ್ಟಿಲ್ಲದಿದ್ದರೂ, ಆಧುನಿಕ ಜಟಿಲ ಸಮಾಜ ರಚನೆಯ ಹಿನ್ನೆಲೆಯಲ್ಲಿ ಈ ಪ್ರಶ್ನೆ ಬಹಳ ಮುಖ್ಯವಾದದ್ದಾಗಿದೆ.

ಸಾಧನೆಯ ಅಂತರಾಯಗಳಿಂದ ಪಾರಾಗುವಲ್ಲಿ, ಸಾಧನಾ ಪಥವನ್ನು ಸುಲಭಗೊಳಿಸಲು ಈ ಪ್ರಶ್ನೆಗಳ ಪಾತ್ರ ಇದೆ. ಸಾಧಕನು ತನ್ನ ಸಾಮರ್ಥ್ಯ, ಒಲವು, ಮನಸ್ಥಿತಿ ಮತ್ತು ಸಂಸ್ಕಾರಗಳಿಗೆ ತಕ್ಕಂತೆ ತನಗೆ ಒಪ್ಪಿಗೆಯಾದ ಜೀವನಮಾರ್ಗವನ್ನು ಆಯ್ಕೆ ಮಾಡಬೇಕು. ಎಲ್ಲರೂ ಗೃಹಸ್ಥರಾಗಲು ಅರ್ಹರಲ್ಲ, ಎಲ್ಲರೂ ಸಂನ್ಯಾಸಿಗಳೂ ಆಗಲಾರರು. ಸಂಘಟನೆಯ ಜೀವನ ಕೆಲವರಿಗೆ ಅನುಕೂಲವಾಗಬಹುದು, ಕೆಲವರಿಗೆ ಪ್ರತಿಕೂಲವಾಗಬಹುದು. ಸಾಧನೆಯಲ್ಲಿ ಒಂದು ಹಂತವನ್ನು ತಲುಪುವವರೆಗೆ ಬಾಹ್ಯ ವ್ಯವಸ್ಥೆಗಳು, ಸಾಮಾಜಿಕ ರಕ್ಷಣೆಗಳು ಬೇಕಾಗುತ್ತವೆ. ಅಂತರಂಗದ ಸ್ಥಿರತೆ, ಸಮತ್ವ ಲಭಿಸಿದಾಗ ಬಾಹ್ಯ ಸಹಾಯಗಳ ಪ್ರಾಮುಖ್ಯತೆ ಕಳಚಿ ಹೋಗುತ್ತದೆ.

#### 2. ಯೋಗ ಮಾರ್ಗದ ಆಯ್ಕೆ:

ಜಗತ್ತಿನಲ್ಲಿ ಅಸಂಖ್ಯ ಸಾಧನಾಮಾರ್ಗಗಳಿವೆ. ಪ್ರತಿಯೊಂದು ಮತ-ಪಂಥವೂ ಶತಮಾನಗಳ ಪ್ರಯೋಗ-ಪರೀಕ್ಷೆಗಳಿಂದ ತನ್ನದೇ ಆದ ಸಾಧನಾಪಥವನ್ನು ಹೊಂದಿದೆ. ಸಾಧಕನು ತನ್ನ ರುಚಿಗೆ ತಕ್ಕಂತೆ ಒಂದು ಮಾರ್ಗವನ್ನು ಆಯ್ಕೆ ಮಾಡುತ್ತಾನೆ. ಸ್ವಾಮೀಜಿ ಎಲ್ಲ ಸಾಧನಾಪದ್ಧತಿಗಳನ್ನು ನಾಲ್ಕು ಯೋಗಮಾರ್ಗಗಳಾಗಿ ವಿಂಗಡಿಸಿದ್ದಾರೆ. ಅಥವಾ ಎಲ್ಲ ಸಾಧನಾಮಾರ್ಗಗಳಲ್ಲೂ ಜ್ಞಾನ, ಭಕ್ತಿ, ಯೋಗ, ಮತ್ತು ಕರ್ಮಗಳು ಒಂದಿಲ್ಲೊಂದು ಪ್ರಮಾಣದಲ್ಲಿ ಇರುತ್ತವೆ. ಚಿಂತನಶೀಲರಿಗೆ ಜ್ಞಾನ, ಭಾವುಕ ಸ್ವಭಾವಕ್ಕೆ ಭಕ್ತಿ, ಕರ್ಮಕ್ಷಮತೆಯುಳ್ಳವರಿಗೆ ಕರ್ಮಯೋಗ, ಧ್ಯಾನಾಭ್ಯಾಸ ಪ್ರವೃತ್ತಿಯುಳ್ಳವರಿಗೆ ರಾಜಯೋಗ. ಆದರೆ ಭಕ್ತಿಯ ಗಂಧವೇ ಇಲ್ಲದ ಜ್ಞಾನಿ ಸಿಗುವುದು ಕಷ್ಟ. ಏಕಾಗ್ರತೆಯಿಲ್ಲದ ಕರ್ಮಯೋಗಿ ಸಿಗುವುದು ಕಷ್ಟ, ಭಕ್ತಿ-ಜ್ಞಾನವಿಲ್ಲದ ಧ್ಯಾನಶೀಲತೆ ಇರಲಾರದು. ಆದ್ದರಿಂದ ಪ್ರತಿಯೊಬ್ಬ ಸಾಧಕನಲ್ಲಿ ನಾಲ್ಕೂ ಗುಣಗಳು ಇರುತ್ತವೆ. ಪ್ರತಿಯೊಬ್ಬ ಸಾಧಕನು ನಾಲ್ಕು ಯೋಗಗಳ ಸಮನ್ವಯವನ್ನು ಸಾಧಿಸಬೇಕು. ಸ್ವಾಮೀಜಿಯವರ ಗಮನ ಈ ಕಡೆಗೆ.

#### 3) ಇಷ್ಟ ಮತ್ತು ಮಂತ್ರದ ಆಯ್ಕೆ:

ಧ್ಯಾನವಿಧಾನ, ಮಂತ್ರ ಮತ್ತು ಇಷ್ಟ — ಇವು ಸಾಧನೆಯ ಪ್ರಧಾನ ಅಂಗಗಳು. ಇವನ್ನು ಗುರು ತೀರ್ಮಾನಿಸುತ್ತಾನೆ. ಈ ಮೂರು ವಿಷಯವನ್ನು ನಿರ್ಧರಿಸುವಲ್ಲಿ ಗುರುವಿನ ಪಾತ್ರ ಪ್ರಧಾನವಾದುದು. ಒಂದು ವೇಳೆ ಗುರು ಸಿಗದಿದ್ದರೆ, ಅನುಭವಿಯಾದ ತನಗಿಂತ ಮುಂದುವರಿದ ಸಾಧಕನ ನೆರವನ್ನು ಪಡೆಯಬೇಕು. ಅದೂ ಆಗದಿದ್ದರೆ ತಾನೇ ತೀರ್ಮಾನ ತೆಗೆದುಕೊಳ್ಳಬೇಕು. ಹೆದರುವುದರಲ್ಲಿ, ಸದಾ ಸಂಶಯದಿಂದ ತೊಳಲಾಡುವಲ್ಲಿ ಪ್ರಯೋಜನವಿಲ್ಲ. ಸಾಧಕ ನಿಜವಾಗಿಯೂ ಪ್ರಾಮಾಣಿಕನಾಗಿದ್ದಲ್ಲಿ ಸಹಾಯ ಸಿಕ್ಕೇ ಸಿಗುತ್ತದೆ. ದಾರಿ ತಪ್ಪಿ ತೊಂದರೆಗೊಳಗಾಗುವುದು, ಅಡ್ಡಿ-ಆತಂಕಗಳು, ನಿಂದೆ-ಸೋಲುಗಳು ಎಲ್ಲ ಮಾರ್ಗಗಳಲ್ಲಿ ಇದ್ದೇ ಇವೆ. ಅವುಗಳೇ ಜೀವನ ಸೌಂದರ್ಯ. ಬುದ್ಧನಿಗೂ ಹಲವು ಕಡೆ ಅಲೆದಾಡಬೇಕಾಯಿತು, ಸೋಲಬೇಕಾಯಿತು. ಕೊನೆಯಲ್ಲಿ ಅವನು ಮಧ್ಯಮ ಮಾರ್ಗವನ್ನು ಕಂಡು ಹಿಡಿದು ಬೋಧಿವೃಕ್ಷದಡಿ, ''ಈ ದೇಹವು ಇದೇ ಆಸನದ ಮೇಲೆ ಒಣಗಿಹೋಗಲಿ, ಮೂಳೆಮಾಂಸಗಳು ಕರಗಿಹೋಗಲಿ, ಒಂದು ಯುಗವೇ ಕಳೆದು ಹೋಗಲಿ, ಸತ್ಯ ಸಾಕ್ಷಾತ್ಕಾರವಾಗುವವರೆಗೆ ಈ ದೇಹವು ತನ್ನ ಆಸನವನ್ನು ಬಿಟ್ಟು ಏಳುವುದಿಲ್ಲ'' ಎಂಬ ಪ್ರತಿಜ್ಞೆಯನ್ನು ಮಾಡಿ ಕುಳಿತನು.

### ೩) ಗುರಿ ಸೇರುವವರೆಗೂ ಯತ್ನ

ಮೇಲಿನ ಶ್ಲೋಕದಲ್ಲಿ **ಅಪ್ರಾಪ್ಯಬೋಧಿಂ ಬಹುಕಲ್ಪದುರ್ಲಭಾಂ** — ಎಂಬುದು ಗುರಿಯನ್ನು ಸೇರುವವರೆಗೂ ನಿಲ್ಲದಿರುವ ಬುದ್ಧನ ದೃಢನಿರ್ಧಾರದ ದ್ಯೋತಕ. ಸ್ವಾಮೀಜಿಯವರೂ ಇದನ್ನೇ ಉದ್ಘೋಷಿಸುತ್ತಾರೆ, ''ಏಳಿ, ಎದ್ದೇಳಿ, ಗುರಿಯನ್ನು

ಸೇರುವವರೆಗೂ ನಿಲ್ಲದಿರಿ.'' ಈ ಸಂಕಲ್ಪದಲ್ಲಿ ಪರಸ್ಪರ ವಿರುದ್ಧ ಭಾವನೆಗಳು ಸೇರುತ್ತವೆ; ೧) ತನ್ನ ಪೂರ್ಣ ಶಕ್ತಿಯನ್ನು ತೊಡಗಿಸಿ ದೀರ್ಘಕಾಲ, ನಿರಂತರ, ತನ್ಮಯತೆಯಿಂದ ಸಾಧನಾ ನಿರತನಾಗುವ ಮನಶ್ಶಕ್ತಿ ಮತ್ತು ೨) ಗುರಿಯನ್ನು ಸೇರುವವರೆಗೂ ಧೈರ್ಯ ತಾಳುವ ಸಾಮರ್ಥ್ಯ. ಪ್ರಸಿದ್ಧ ಸೂಫಿ ಸಂತ ಜುನಾಯಿದ್ ''ನನಗೆ ಸಾವಿರ ವರ್ಷ ಆಯಸ್ಸು ಲಭಿಸಿದರೂ ನಾನು ಸಾಧನೆಯ ಆಸಕ್ತಿಯನ್ನು, ಫಲವನ್ನು ಒಂದಿನಿತೂ ಕಡಿಮೆ ಮಾಡುವುದಿಲ್ಲ'' ಎನ್ನುತ್ತಾನೆ. ಗುರಿಯನ್ನು ಸಾಧಿಸದಿದ್ದರೂ ಸಾಧನೆಯನ್ನು ಬಿಡದಿರುವುದು, ದೇಹ ಉರುಳಿದರೂ ಸಾಧನಾಪಥದಿಂದ ವಿಮುಖನಾಗದಿರುವುದು. ಸರ್ವಶ್ರೇಷ್ಠ ಗುರಿಯನ್ನು ಸಾಧಿಸುವಲ್ಲಿ ಯಾವ ಸಾಧನೆಯೂ ಅತಿಯಾಗಲಾರದು. ಭಗವಂತನಿಗಾಗಿ ದೇಹತ್ಯಾಗವಾದರೆ ಅದು ಮಹಾಭಾಗ್ಯವೇ ಸರಿ. ಹಾಗೆಂದು ಬೇಕೆಂತಲೇ ಅಪಾಯಕ್ಕೆ ತಲೆಯೊಡ್ಡಿ ಸಾಯಬೇಕೆಂಬುದು ಅರ್ಥವಲ್ಲ. ಅಥವಾ ಸಾಧನೆಯ ಆರಂಭದ ವರ್ಷಗಳಲ್ಲಿ ಬಹಳ ಸಾಧನೆ ಮಾಡಿ ತೊಂದರೆಗೊಳಗಾಗುವುದೂ ಅಲ್ಲ. ಪರ್ವತದ ತುದಿಯನ್ನು ತಲುಪುವ ಅತಿ ಉತ್ಸಾಹದಲ್ಲಿ ಪೂರ್ವ ತಯಾರಿಯಿಲ್ಲದೆ ಲಗುಬಗೆಯಿಂದ ಬೆಟ್ಟ ಏರಲು ಆರಂಭಿಸಿ, ಓಡುತ್ತ ೫೦ ಹೆಜ್ಜೆ ಹಾಕುತ್ತಲೇ ಸೋತು ಸುಣ್ಣವಾಗುತ್ತಾರೆ ಅಥವಾ ಬಿದ್ದು ಕೈ ಕಾಲು ಮುರಿದುಕೊಳ್ಳುತ್ತಾರೆ. ಆದ್ದರಿಂದ ಧೈರ್ಯ ಹಾಗೂ ಉತ್ಸಾಹದ ಹೆಸರಿನಲ್ಲಿ ವ್ಯಕ್ತಿ ತನ್ನ ಮಿತಿಯನ್ನು ದಾಟುವಂತಿಲ್ಲ.

ಬುದ್ಧನಲ್ಲಿ ಆ ಸಮತೋಲನ ಇತ್ತು. ಆದ್ದರಿಂದ ಅವನು ಬಹುಬೇಗ ಯಶಸ್ವಿಯಾದನು. ಉತ್ಸಾಹದ ಜೊತೆಯಲ್ಲಿ ಕೊನೆಯ ಗಳಿಗೆಯವರೆಗೂ ಕಾಯಲು ಸಿದ್ಧನಿರುವುದು ಒಂದು ಶ್ರೇಷ್ಠ ಗುಣ. ಸೂಫಿ ಸಂತ ಹಬೀಬ್ ಅಜಮಿ ತನ್ನ ಜೀವನದಲ್ಲಿ ಹಿಂದೆ ಅತಿ ಜಿಪುಣ ಹಾಗೂ ಕ್ರೂರಿ, ದುಷ್ಟನಾಗಿದ್ದನು. ಅವನು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ದಾರಿಯಲ್ಲಿ ಆಟವಾಡುತ್ತಿದ್ದ ಮಕ್ಕಳು ಪರಸ್ಪರರಿಗೆ ''ದೂರ ಸರಿಯಿರಿ. ಜಾಲಿಮ (ಪಾಪಿ) ಹಬೀಬನ ಪಾದದ ಧೂಳು ಸಿಡಿದು ನಾವು ಪಾಪಿಗಳಾಗುವುದು ಬೇಡ.'' ಎಂದು ಕಿರುಚುತ್ತ ಓಡಿಹೋದರು. ಅವನು ಮನೆಯನ್ನು ತೊರೆದು ಹೋಗಿದ್ದುದು ಪೀರ್ ಮತ್ತು ತೌಬಾ(ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಮತ್ತು ಪುನಃ ಮಾಡದಿರುವಂತೆ ಪ್ರತಿಜ್ಞೆಯನ್ನು ಮಾಡುವುದು)ಗಾಗಿ. ತೌಬಾದಿಂದ ಅವನು ಮರಳುವಾಗಲೂ ಮಕ್ಕಳು ಅವನನ್ನು ನೋಡಿ ದೂರ ಸರಿದರು. ಆಗ ಅವರು ''ದೂರ ಸರಿಯಿರಿ. ನಮ್ಮ ಹೆಜ್ಜೆಯ ದೂಳು ಪವಿತ್ರನಾದ ಹಬೀಬನ ಮೇಲೆ ಬಿದ್ದು ನಾವು ದೋಷಿಗಳಾಗುವುದು ಬೇಡ'' ಎಂದು ಮಾತನಾಡಿಕೊಂಡರು. ತಾನು ಬದಲಾಗಬೇಕೆಂಬ ಹಬೀಬನ ಸಂಕಲ್ಪ ಅಷ್ಟು ಪ್ರಬಲವಾಗಿತ್ತು. ಆದರಿಂದಲೇ ಅವನು ಪವಿತ್ರನಾದನು. ಅಂತೆಯೇ ನಿಜವಾದ ಸಾಧಕನಿಗೆ ಸಾಕ್ಷಾತ್ಕಾರಕ್ಕಾಗಿ ಯುಗಯುಗಗಳ ವರೆಗೆ ಕಾಯಬೇಕಾಗುವುದಿಲ್ಲ. ಆದರೆ ಅವನು ತನ್ನ ಪ್ರಾಣಪ್ರಿಯನಿಗಾಗಿ ಎಷ್ಟು ಕಾಯಲೂ ಸಿದ್ಧನಿರುತ್ತಾನೆ.

## ೪) ಅಡೆತಡೆ, ಪ್ರಲೋಭನೆಗಳಲ್ಲಿ ಅವಿಚಲನಾಗಿರುವುದು

ಬುದ್ಧ ತನ್ನ ಮಹಾ ಸಂಕಲ್ಪವನ್ನು ಮಾಡಿ ಆಸನದಲ್ಲಿ ಕುಳಿತಾಗ ಮಾರ ಅವನ ಮೇಲೆ ಆಕ್ರಮಣಗೈದನು. ಕಲಾವಿದರು ಇದನ್ನು– ಪರಮಶಾಂತ, ಗಂಭೀರ, ಅಂತರ್ಮುಖಿಯಾದ ಬುದ್ಧನನ್ನು ಒಂದೆಡೆ ಘೋರರೂಪಿಗಳಾದ ರಕ್ಕಸರು ವಿವಿಧ ಆಯುಧಗಳನ್ನು ಝಳಪಿಸುತ್ತ ಹೊಡೆಯಲೆತ್ನಿಸಿ ಹೆದರಿಸುತ್ತಿದ್ದರೆ, ಇನ್ನೊಂದೆಡೆ ಬೆಡಗಿನ ಲಲನೆಯರು ತಮ್ಮ ಹಾವಭಾವ ಕಟಾಕ್ಷಗಳಿಂದ ಆಕರ್ಷಿಸಲು ನೋಡುತ್ತಿದ್ದಾರೆ — ಎಂದು ಚಿತ್ರಿಸಿದ್ದಾರೆ. ಕಷ್ಟ ವಿಪತ್ತುಗಳು, ಮೃತ್ಯುಭಯ, ಇಹ–ಪರಗಳ ಭೋಗ ಸಾಮಗ್ರಿಗಳು ಅಧಿಕಾರ ಸ್ಥಾನಮಾನಗಳ ಪ್ರಲೋಭನೆ ಇವು ಮಾರನ ರೂಪಗಳು. ಎಲ್ಲ ಮಹಾಪುರುಷರನ್ನು ಮಾರ ಒಂದಿಲ್ಲೊಂದು ಸಂದರ್ಭದಲ್ಲಿ ತನ್ನ ಬಲೆಯೊಳಗೆ ಹಾಕಲು ನೋಡುತ್ತಾನೆ.

ಶ್ರೀರಾಮಕೃಷ್ಣರಿಗೆ ಜಗನ್ಮಾತೆ ಒಂದು ಹರಿವಾಣ ಸುವರ್ಣ ನಾಣ್ಯಗಳು ಮತ್ತು ಇಬ್ಬರು ಯುವತಿಯರನ್ನು ತೋರಿಸಿದಳು. ತಾಯಿ ಅವರಿಗೆ ಅಷ್ಟಸಿದ್ಧಿಗಳನ್ನು ನೀಡಲು ಬಂದಳು. ಶ್ರೀ ರಾಮಕೃಷ್ಣರು ಪ್ರಲೋಭಿತರಾಗಲಿಲ್ಲ. ಬುದ್ಧನೂ ಮಾರನ ಆಕ್ರಮಣದಿಂದ ಹೆದರಲಿಲ್ಲ, ವಿಚಲಿತನಾಗಲಿಲ್ಲ. ಮಹಾಪುರುಷರ ಜೀವನದಲ್ಲೂ, ನಮ್ಮ ಜೀವನದಲ್ಲೂ ಪ್ರಲೋಭನೆಗಳು ಬಂದೇ ಬರುತ್ತವೆ. ನಾವು ಅವುಗಳಿಗೆ ವಶರಾಗುತ್ತೇವೆ. ಮಹಾತ್ಮರು ಅವನ್ನು ಪರಾಭವಗೊಳಿಸುತ್ತಾರೆ. ನಾವು ವಿಶ್ವಾಮಿತ್ರನ ಉದಾಹರಣೆಯನ್ನು ತೆಗೆದುಕೊಳ್ಳಬೇಕು.

ಮತ್ತೆ ಮತ್ತೆ ಪ್ರಲೋಭನೆಗೆ ವಶನಾಗಿಯೂ ಈ ಋಷಿ ಮತ್ತೆ ತನ್ನನ್ನು ತಾನು ಮೇಲೆತ್ತಿಕೊಂಡನು. ಕೊನೆಗೂ ಸಿದ್ಧಿಯನ್ನು ಪಡೆದನು. ಆದರೆ ಈ ಬಗೆಯ ಘಟನೆಗಳು ಮಹಾನ್ ಶಕ್ತಿಕ್ಷಯವನ್ನು ಮಾಡುತ್ತವೆ. ಜೀವಿಗೆ ಭಯಂಕರ ಹಾನಿಯನ್ನು ಮಾಡುತ್ತವೆ.

ಜೀವಿಯನ್ನು ಸಿಕ್ಕಿಸಿ ಬೀಳಿಸಲು ಯೋಗದ ಅತ್ಯುನ್ನತ ಸ್ಥಿತಿಯಲ್ಲಿ ಅಣಿಮಾದಿ ಸಿದ್ಧಿಗಳಲ್ಲದೆ ಅನೇಕ ಸಣ್ಣ ದೊಡ್ಡ ಪ್ರಲೋಭನೆಗಳಿವೆ. ಒಬ್ಬ ಕ್ರೈಸ್ತ ಸಂತ, – 'The life of a man on earth is a temptation - ಮನುಷ್ಯ ಜೀವನ ಪ್ರಲೋಭನೆಗಳ ಸರಣಿಯಲ್ಲದೆ ಮತ್ತೇನೂ ಅಲ್ಲ' — ಎಂದು ಹೇಳುತ್ತಾನೆ. ಜನ್ಮಜನ್ಮಾಂತರಗಳ ಅಸಂಖ್ಯ ಸಂಸ್ಕಾರಗಳು, ಅನೇಕ ಸೂಕ್ಷ್ಮ ವಾಸನೆಗಳು ಮತ್ತು ಸ್ಥೂಲ ಬಾಹ್ಯ ಪರಿಸ್ಥಿತಿಗಳ ಮುಖವಾಡದಡಿ ಪ್ರಲೋಭನೆಗಳು ಬರುತ್ತಲೇ ಇರುತ್ತವೆ. ಗುರಿ ಮತ್ತು ದಾರಿಯನ್ನು ಕುರಿತು ಸ್ಪಷ್ಟ ಕಲ್ಪನೆಯನ್ನು ಹೊಂದಿರುವ ದೃಢಸಂಕಲ್ಪ ಸುಸಜ್ಜಿತ ಸಾಧಕನ ಎಲ್ಲ ಶಕ್ತಿಗಳೂ ಏಕಾಗ್ರವಾಗುತ್ತವೆ. ಅವನು ಎಲ್ಲ ಪ್ರಲೋಭನೆ ಮತ್ತು ಅಂತರಾಯಗಳಿಂದ ಪಾರಾಗುತ್ತಾನೆ.

ಬುದ್ಧ, ಮಹಾವೀರ, ರಾಮಕೃಷ್ಣರು, ವಿವೇಕಾನಂದರು ಇವರೆಲ್ಲ ಸಾವಿರಾರು ವರ್ಷಗಳಿಗೊಮ್ಮೆ ಅವತರಿಸುವಂತಹ ಮಹಾನುಭಾವರು. ನಾವು ಎಂದೆಂದಿಗೂ ಅವರಂತೆ ಆಗಲಾರೆವು. ಅದನ್ನು ನಾವು ನಮ್ರವಾಗಿ ಒಪ್ಪಿಕೊಳ್ಳೋಣ. ಅವರ ಸ್ಫೂರ್ತಿಯನ್ನು ಧರಿಸಿಕೊಂಡು, ಅವರ ಕೃಪಾಕಟಾಕ್ಷದಿಂದ ಆ ಮಾರ್ಗದಲ್ಲಿ ಬಾಲ ಹೆಜ್ಜೆಗಳನ್ನಿಡೋಣ.